(ಸದನ 11-10 ನಿಮಿಷಕ್ಕೆ ಪ್ರಾರಂಭವಾಯಿತು)

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಇವತ್ತೂ ಕೂಡ ಸದನ ಪ್ರಾರಂಭವಾದರೂ ಇನ್ನೂ ಆಡಳಿತ ಪಕ್ಷದ ಕಡೆಯಲ್ಲಿ ಮಂತ್ರಿಗಳ್ಯಾರೂ ಬಂದಿಲ್ಲ.

(ಗೊಂದಲ)

ಅಧ್ಯಕ್ಷರು :- ನೋಡಿ ಈಗ ಬಂದೇ ಬಿಟ್ಟರು., ಎಷ್ಟು ಜನ ಒಳಗೆ ಬಂದರು ನೋಡಿ.

(ಗೊಂದಲ)

ಅಧ್ಯಕ್ಷರು :- ಸಾಕು, ಸಾಕು, ಎಲ್ಲರೂ ಹೇಳಿದ್ದೀರಿ ಸಾಕು. ಖಂಡಿತ, ಇನ್ನು ಮುಂದೆ ಎಲ್ಲಾ ಸದಸ್ಯರು ಸದನಕ್ಕೆ ಸರಿಯಾದ ಸಮಯಕ್ಕೆ ಹಾಜರಾಗಬೇಕು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ನಿಮಗೆ ಎಲ್ಲರೂ ಗೌರವ ಕೊಡಬೇಕು. ಸದನಕ್ಕೆ ಎಲ್ಲರೂ ಸಮಯಕ್ಕೆ ಸರಿಯಾಗಿ ಹಾಜರಾಗಬೇಕೆಂದು ನೀವು ಆದೇಶ ಮಾಡಬೇಕು.

ಅಧ್ಯಕ್ಷರು :- ಖಂಡಿತ, ಖಂಡಿತ ಆ ರೀತಿ ಮಾಡಲೇಬೇಕು, ಬೇರೆ ಮಾರ್ಗವೇ ಇಲ್ಲ. ಈಗ ಎಲ್ಲರೂ ಕುಳಿತುಕೊಳ್ಳಿ. ಈಗಾಗಲೇ ಟೈಂ ಆಗಿದೆ, ಸುಮ್ಮನೆ ಹತ್ತು ನಿಮಿಷ ವೇಸ್ಟ್ ಆಗಿಹೋಯಿತು. ಖಂಡಿತ ನಿಮ್ಮ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ :- ಪುರಾಣ ಹೇಳುವುದಕ್ಕೆ ಬದನೇಕಾಯಿ ತಿನ್ನುವುದಕ್ಕೆ ಎಂದ ಹಾಗಾಯಿತು ಇವರದ್ದು.

ಅಧ್ಯಕ್ಷರು :- ಅದು ಇರೋದೇ ಹಾಗಲ್ಲವೆ? ಆ ಗಾದೆಗಳೆಲ್ಲಾ ಹುಟ್ಟಿಕೊಂಡದ್ದೇ ಇಂಥ ಕಾರಣಗಳಿಂದಾಗಿ. ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮುಂದುವರಿಸಬೇಕು. ನೀವೆಲ್ಲರೂ ಕುಳಿತುಕೊಳ್ಳಿ. ಅದಕ್ಕೂ ಮುಂದೆ ರೇವಣ್ಣನವರೆ, ನೀವು ಏನು ಹೇಳಬೇಕೆಂದಿದ್ದೀರೋ ಅದನ್ನು ಕೇವಲ ಎರಡು ನಿಮಿಷದಲ್ಲಿ ಹೇಳಿ ಮುಕ್ತಾಯ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು :– ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಿದೆ.

ಅಧ್ಯಕ್ಷರು :– ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾಗಿರುವ ವಿಷಯಗಳನ್ನು ಈಗ ತೆಗೆದುಕೊಳ್ಳುವುದಿಲ್ಲ. ಅದನ್ನು afternoon ತೆಗೆದುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :– ಮಧ್ಯಾಹ್ನದ ಮೇಲೆ ತೆಗೆದುಕೊಂಡಾಗ ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಖಂಡಿತ, ತುಂಬಾ ಜನರು ಇದ್ದಾರೆ. ಎಲ್ಲರಿಗೂ ಸ್ವಲ್ಪ ಸ್ವಲ್ಪ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ :– ಮಾನ್ಯ ಅಧ್ಯಕ್ಷರೆ, ಗೆದ್ದಿದ್ದಾರೆ, ಆಡಳಿತ ಪಕ್ಷದವರಾದ ಅವರು ಸಂಭ್ರಮ, ಉತ್ಸಾಹಗಳಿಂದ ಬಂದು ಅವರು ಮುಂಚೆ ಕುಳಿತುಕೊಳ್ಳಬೇಕು. ಆದರೆ ಏಕೋ ಏನೋ ಆ ಉತ್ಸಾಹವೇ ಅವರಲ್ಲಿ ಕಾಣುತ್ತಿಲ್ಲ.

1, ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅನುಮತಿ ಕೋರಿಕೆ.

ಅಧ್ಯಕ್ಷರು :– ಈಗ ಆ ವಿಚಾರ ಬೇಡ. ಮಾನ್ಯ ರೇವಣ್ಣನವರೆ, ನೀವು ಮಾತನಾಡಿ.

ವಿಷಯ :– ಆಲೂಗೆಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದು ಬೆಳೆ ಸಂಪೂರ್ಣ ನಾಶವಾಗಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ನಮ್ಮ ಹಾಸನ ಜಿಲ್ಲೆಯೊಳಗೆ ಮೇಜರ್ ಕ್ರಾಪ್ ಎಂದರೆ ಆಲೂಗಡ್ಡೆ ಬೆಳೆಯಾಗಿದೆ. ಕಳೆದ ನಾಲ್ಕು ವರ್ಷದಿಂದ ಆಲೂಗಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದು ಬೆಳೆ ಸಂಪೂರ್ಣ ಹಾಳಾಗಿದೆ. 31825 ಟನ್ ಆಲೂಗಡ್ಡೆ ಭಿತ್ತನೆ ಬೀಜವೆಂದು ಎ.ಪಿ.ಎಂ.ಸಿ.ಯವರು ತಂದಿರುವುದರಲ್ಲಿ ವರ್ತಕರು ಮತ್ತು ಎ.ಪಿ.ಎಂ.ಸಿ.ಯವರಲ್ಲಿ ಕೆಲವರು ಸೇರಿಕೊಂಡು ಶಾಮೀಲಾಗಿ certified seeds ಎಂದು ತಂದಿದ್ದಾರೆ. ಆದರೆ ಅದು certified seeds ಅಲ್ಲ. ನಾನು ತಮಗೆ ಕಳುಹಿಸಿಕೊಡುತ್ತೇನೆ. ದಿನಾಂಕ 13–05–2013 ರಿಂದ ಇದನ್ನು ಮಾರಾಟ ಮಾಡುತ್ತಿದ್ದಾರೆ.